**ದಿನಾಂಕ 07.07.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ2 ಮತ್ತು 3 ನೇ ಎದುರುದಾರರ ಪರ CR ವಕೀಲರಿಂದ**

ಸ.ನಂ.56/1 ನ್ನು 56/2 ಮತ್ತು 56/8 ಎಂದು ಬದಲಾವಣೆ ಮಾಡುವ ಸಮಯದಲ್ಲಿ ಸರ್ವೆ ಇಲಾಖೆಯವರು ನಿಮಗೆ ನೋಟಿಸು ನೀಡಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ಸರ್ವೆ ಹಿಸ್ಸಾ ಬದಲಾವಣೆ ಕಾಲಕ್ಕೆ ನನಗೆ ಸರ್ವೆ ಇಲಾಖೆಯಿಂದ ಯಾವುದೇ ನೋಟಿಸು ಬಂದಿರುವುದಿಲ್ಲ. ಡಿಡಿಎಲಆರ್ ಮತ್ತು ಎಸಿ ಇವರ ಆದೇಶದ ಮೇರೆಗೆ ಸರ್ವೆ ಇಲಾಖೆಯವರು ಸರ್ವೆ ಮಾಡಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ನಾವು ಸರ್ವೆ ಮಾಡುವುದಿಲ್ಲ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಸರ್ವೆ ಮಾಡುವಂತೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ದಿನಾಂಕ 15.07.2022 ಕ್ಕೆ ಸರ್ವೆಗಾಗಿ ಸರ್ವೆ ಇಲಾಖೆಯವರು ಬಂದಿದ್ದರು ಎಂದರೆ ನಿಖರವಾಗಿ ನೆನಪಿಲ್ಲ. ಜೆಡಿಆರ್ 3 ಸರ್ವೆ ಕಾಲಕ್ಕೆ ತಕರಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಎದುರುದಾರ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸರ್ವೆ ಇಲಾಖೆಯವರು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 18.07.2022 ರಲ್ಲಿ ದಕ್ಷಿಣ ಭಾಗದಲ್ಲಿ 3 ನೇ ಎದುರುದಾರ ಸ್ವಾಧೀನದಲ್ಲಿ ಇರುತ್ತಾರೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಡಿಎಲಆರ್ ದೇವದುರ್ಗ ಇವರು ಪೋಲಿಸ ಇಲಾಖೆಗೆ ನೀಡಿದ ಅರ್ಜಿಯನ್ನು ನನಗೆ ನೀಡಿಲ್ಲ. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರ 2 ಮತ್ತು 3 ರವರ ಜಾಗೆಯನ್ನು ಅತಿಕ್ರಮಣ ಪೆನ್ಸ ಹಾಕಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪೆನ್ಸ ತೆರುವುಗೊಳಿಸಲು ಎಡಿಎಲಆರ್ ಇವರು ನ್ಯಾಯಾಲಯಕ್ಕೆ ಅರ್ಜಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಈಗ ಸರ್ವೆ ಮಾಡಿಸಲು ನನ್ನದು ತಕರಾರು ಇರುವುದಿಲ್ಲ. ದಿನಾಂಕ 26.07.2022 ಪಂಚನಾಮೆಯಲ್ಲಿ ಸರ್ವೆ ಇಲಾಖೆಯವರು ಶಿವಬಸ್ಸಮ್ಮ 6 ಎಕರೆ ಜಮೀನು ಖರೀದಿ ಮಾಡಿದ್ದು ಆದರೆ ಸ್ವಾಧೀನದಲ್ಲಿ ಕಡಿಮೆ ಕ್ಷೇತ್ರದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯಲ್ಲಿ ಸ.ನದ.56/1 ರಲ್ಲಿ 1

ಎಕರೆ 20 ಗುಂಟೆ ಜಮೀನಿನಲ್ಲಿ ಶಿವಪಾದಪ್ಪ ಸಾಗುವಳಿ ಮಾಡಿರುತ್ತಾನೆ ಮತ್ತು 2 ಎಕರೆ 36 ಗುಂಟೆ ರಸ್ತೆಗೆ ಹೋಗಿರುತ್ತದೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ದಿನಾಂಕ 26.07.2022 ರ ಪಂಚನಾಮೆಯನ್ನು ಸಾಕ್ಷಿಗೆ ತೋರಿಸಿದ್ದು ಅದರಲ್ಲಿ ಇರುವ ಸಹಿ ತನ್ನದು ಅಲ್ಲ ಎಂದು ನುಡಿಯುತ್ತಾರೆ. ಆ ಕುರಿತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ವಾಸ್ತವದಲ್ಲಿ ನಾನು ಖರೀದಿ ಮಾಡಿದ 6 ಎಕರೆ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. 6 ಎಕರೆ ಜಮೀನು ಕೊಡಿಸುವಂತೆ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2 ಮತ್ತು 3 ನೆ ಎದುರುದಾರರ ಜಮೀನನ್ನು ಕಬಳಿಸುವ ಉದ್ದೇಶದಿಂದ ರಾಜಿ ಮಾಡಿಕೊಂಡು ಸುಳ್ಳು ಡಿಕ್ರಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಜೆಡಿಆರ 2 ಮತ್ತು 3 ಇವರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.